

## ಕಳೆದ ಸಂಚಿಕೆಯಲ್ಲಿ

ಮಲ್ಲೂರಿಗೆ ಹೋಗುವ ಬಸ್ಸಿಗಾಗಿ ಎಲ್ಲರೂ ಕಾಯುತ್ತಿರುತ್ತಾರೆ. ಆಗ ಮಾಯಕ್ಕ ತನ್ನ ಗಂಡನೊಂದಿಗೆ ಅಲ್ಲಿಗೆ ಬರುತ್ತಾಳೆ. ಎಲ್ಲರೂ ಬನ್ನಿ, ಕೂಡ್ರಿ ಎಂದು ಉಪಚರಿಸುತ್ತಾರೆ. ಹಳ್ಳಿಯ ಜನರಿಗೆ 'ಈ ಸಲ ಬಸ್ ಬರುವಂಗ ಮಾಡಿಸ್ತೀನಿ, ದಾರಿ ಸರಿ ಮಾಡ್ಸಿ ಕೊಟ್ಟೀನಿ, ಕುಡಿಯುವ ನೀರ ಬರಂಗ ಮಾಡ್ತೀನಿ' ಎಂದೆಲ್ಲ ಮಾಯಕ್ಕ ಭರವಸೆ ಕೊಡ್ತಾಳೆ. ಆಗ ಊರ ಮಂದಿ ಸಂತೋಷದಿಂದ ಉಬ್ಬಿಹೋಗುತ್ತಾರೆ. ಮಾಯಕ್ಕನ ಬಗ್ಗೆ ಮಾತನಾಡುತ್ತ ಕುಳಿತಿದ್ದಂತೆ ಬಸ್ ಬರುತ್ತದೆ. ಪಂಚಾಯಿತಿಯ ಹಳೆಯ ಚೇರ್‌ಮನ್ ಆಗಿದ್ದ ಸಿದ್ದಣ್ಣ ಹುಚ್ಚು ಹಿಡಿದವನಂತೆ ವರ್ತಿಸುವುದು ಊರಿನವರಿಗೆ ನುಂಗಲಾರದ ತುತ್ತಾಗುತ್ತದೆ. ಸಿದ್ದಣ್ಣನ ಬಾಲ್ಯದ ದಿನಗಳನ್ನು ನೆನಪಿಸುತ್ತಾರೆ ಹಳ್ಳಿಯ ಜನ.

---

ಹುಟ್ಟುತ್ಲೆ ಕಲಿತು ಬಂದಾಳ ಕಾಣ್ತದ. ಯಬರೇಶಿ ದೇವಪ್ಪಗ ಹಿಂದೆ ಏನು ತಿನ್ನಿಸಿದರೋ, ಏನು ಮಂತ್ರ ಹಾಕಿದರೋ ಒಂದೂ ತಿಳಿಯಂಗಿಲ್ಲ. ಆಕೀನ್ನ ಒಮ್ಮಿಂದೊಮ್ಮೆಲೆ ತನ್ನ ಪಟಪಟ್ಟಿ ಮ್ಯಾಲ ಕುಂಡ್ರಿಸಿಕೊಂಡು ಬಂದ. ಅಲ್ಲ, ಸ್ವಲ್ಪನಾದರೂ ವಿಚಾರ ಮಾಡಬೇಕಿತ್ತೋ, ಬೇಡವೋ ನೀನೇ ಹೇಳು. ಮೊದಲು ಮಾಯೀನ ಆಕಿ ಸೋದರಮಾವ ಮುತ್ತಪ್ಪಗ ಮದುವಿ ಮಾಡಿಕೊಟ್ಟಿದ್ದರಂತ. ಸಣ್ಣಾಕಿ ಇರ್ತಾ ಮದುವಿ ಆಗಿತ್ತು ಕಾಣ್ತದ. ಈಕಿ ಋತುಮತಿ ಆದ ಕೂಡಲೆ ಈಕೀನ ಕರಕೊಂಡು ಹೋಗ್ಯಾರ. ಆ ಊರಾಗ ಈಕಿ ದೊಡ್ಡ ರಾಡಿರಂಪ ಮಾಡೀದಳಂತ. ಆಕೀದು ದೊಡ್ಡ ಕತಿ ಐತಿ. ಮತ್ತೊಂದಿನಾ ಹೇಳ್ತೀನಿ.'

ಅವ್ವ ಹೇಳುವುದರಲ್ಲಿ ಎಷ್ಟು ನಿಜವೋ, ಎಷ್ಟು ಸುಳ್ಳೋ? ಹಾಗೆ ನೋಡಿದರೆ ಒಂದು ರೀತಿಯಲ್ಲಿ ಅವ್ವನಿಗೆ ಮಾಯಕ್ಕನ ಗೀಳು ಹತ್ತಿದೆ. ಹಗಲು ಹನ್ನೆರಡು ತಾಸು ಮತ್ತು ರಾತ್ರಿ ಆರು ತಾಸು ಆಕೆ ಮಾಯವ್ವನ ಭ್ರಾಂತಿಯಲ್ಲಿಯೆ ಇರುತ್ತಾಳೆ. ಅವಳನ್ನೆ ಕನವರಿಸುತ್ತಾಳೆಂದು ಕಾಣುತ್ತದೆ.

ಎಲ್ಲಿಂದಲೊ ಬಂದ ದೇವಪ್ಪ ಹತ್ತಾರು ವರ್ಷಗಳಲ್ಲಿ ಮಲ್ಲೂರಿಗಷ್ಟೆ ಅಲ್ಲದೆ ಸುತ್ತಮುತ್ತಲ ಹಳ್ಳಿಗಳಲ್ಲಿಯೂ ಪರಿಚಿತನಾಗಿದ್ದ. ಆತ ಇಲ್ಲಿ ಠಿಕಾಣಿ ಹೂಡಿದ ಒಂದೆರಡು ವರ್ಷಗಳಲ್ಲಿ ಈ ಊರಿನವನೆ ಆಗಿದ್ದ. ಇದೇ ಊರಲ್ಲಿ ಹುಟ್ಟಿ, ಇಲ್ಲಿಯೆ ಬೆಳೆದವನಾಗಿರಬೇಕೆಂದು ಅನಿಸುತ್ತಿತ್ತು. ಊರಿನ ಧನಿಕರು ಕೆಲವರಿಗೆ ಸಾಲ ಕೊಡಲು ನಿರಾಕರಿಸಿದಾಗ ಅಂತಹವರಿಗೆ ಈತ ಸಾಲ ಕೊಟ್ಟು ಅವರ ವಿಶ್ವಾಸವನ್ನು ಗಳಿಸಿದ್ದ.

'ಪಾಪ, ದೇವಪ್ಪ ಅದಾನಂತ ನಮ್ಮ ಬಾಳೆ ನಡೀತು. ಅಂವ ರೊಕ್ಕದ ಸಹಾಯ ಮಾಡಿದ್ದಿಲ್ಲಂದ್ರ ತಾವು ಬಿತ್ತೋದು ಕಷ್ಟ ಇತ್ತು. ಮತ್ತೊಂದು ಏನಂದ್ರ ಕೊಟ್ಟ ರೊಕ್ಕಕ್ಕ ಬಡ್ಡಿಗಿಡ್ಡಿ ಏನೂ ಕೇಳಂಗಿಲ್ಲ. ನಾಗರಾಜಪ್ಪ ಸಾಹುಕಾರ, ಪರ್ವತಗೌಡ ಸಾಹುಕಾರ ಮುಂತಾದವರಿಗೆ ಇತ್ತೀಚೆಗೆ ಎಷ್ಟು ಸೊಕ್ಕು ಬಂದಿತ್ತು. ನಮ್ಮನ್ನೆಲ್ಲ ದಾರದಟ್ಟು ಮಾಡತಿದ್ರು. ಅವರ ಮನ್ಯಾಗಿನ ನಾಯಿಗೆ ಕೊಡುವಷ್ಟು ಕಿಮ್ಮತ್ತನ್ನೂ ನಮಗ ಕೊಡ್ತಿರಲಿಲ್ಲ. ಈ ದೇವಪ್ಪ ಬಂದಂತ ನಮ್ಮ ಹೊಲಮನಿ ಉಳಿದ್ವು. ಇಲ್ಲಾಂದ್ರ ಅವಗಳನ್ನು ಅವರು ಬರಸಕೊಂಡು ಎಷ್ಟೊ ವರ್ಷ ಆಗಿರತಿತ್ತು. ದೇವಪ್ಪ ದೇವರಾಗಿ ಬಂದ ಅನಬೇಕು. ಅಂವಂದು ಒಂದೇ ಕಂಡಿಷನ್ನು ಏನಂದ್ರ ಫೀಕು ಬಂದ ಕೂಡಲೆ ಇಸಗೊಂಡಿದ್ದು ಕೊಟ್ಟು ಬಿಡಬೇಕು. ಆ ಕರಾರು ಮಾತ್ರ ಇದ್ದೇ ಇರತಿತ್ತು.'

ಬೀಜದ ಸಲುವಾಗಿ, ಪಂಪ್‌ಸೆಟ್ ಸಲುವಾಗಿ, ನೀರಪೈಪಿನ ಸಲುವಾಗಿ, ಬಿತ್ತುವ ಕೂರಿಗೆಯ ಸಲುವಾಗಿ, ಮಕ್ಕಳ ಕಾಲೇಜು ಸಲುವಾಗಿ, ಮಗಳ ಮದುವೆಯ ಸಲುವಾಗಿ ರೈತರು ದೇವಪ್ಪನಲ್ಲಿ ಸಾಲ ಕೇಳಲು ಬಂದೇ ಬರುತ್ತಿದ್ದರು. ಇತ್ತೀಚೆಗೆ ಹೊಂಗಲದ ಡೈರಿಯವರು ಹಾಲು ತುಂಬಿಸುವ ಸಲಹೆ ಕೊಟ್ಟರು. ಇದರಿಂದ ಆದೀತೆಷ್ಟು, ಹೋದಿತೆಷ್ಟು ಎಂದು ದೇವಣ್ಣ ತಲೆ ಕೆಡಿಸಿಕೊಳ್ಳಲಿಲ್ಲ. ಮಾಯಕ್ಕನಿಗೆ ಅದು ತುಂಬ ಒಳ್ಳೆಯ ಸಲಹೆ ಎನಿಸಿತು. ಹನಿ ಹನಿ ಸೇರಿ ಹಳ್ಳ, ತೆನೆ ತೆನೆ ಕೂಡಿ ಬಳ್ಳ ಆಗುವುದಿಲ್ಲವೆ? ಆಕೆ ಗಂಟುಬಿದ್ದಳು. ಮನೆಮನೆಯಿಂದ ಹಾಲು ತುಂಬಿಸಲು ಸುರು ಮಾಡಿದರೆ ಅದರಿಂದ ಮುಂದೆ ಒಳ್ಳೆಯ ವ್ಯಾಪಾರವಿದೆಯೆಂದು ಅವನಿಗೆ ಮನದಟ್ಟು ಮಾಡಿಸಿದಳು. ಹಸು, ಎಮ್ಮೆಗಳನ್ನು ಸಾಕಿಕೊಂಡಿರುವ ಮನೆಗಳಿಗೆ ಹೋಗಿ ಅವರು ಹಾಕುವ ಲೀಟರೋ, ಅರ್ಧ ಲೀಟರೋ ಹಾಲನ್ನು ಕ್ಯಾನಿನಲ್ಲಿ ತುಂಬಿಸಿಕೊಂಡು ಬರಲಿಕ್ಕೆ ಹುಡುಗನೊಬ್ಬನ ಸಹಾಯ ದೇವಪ್ಪನಿಗೆ ಬೇಕಿತ್ತು. ಅಂತಹ ನಂಬಿಗಸ್ಥ ಹುಡುಗನ ಹುಡುಕಾಟದಲ್ಲಿ ತೊಡಗಿದ.

ವಾರವಾದರೂ ಯಾರೂ ಪತ್ತೆಯಾಗಲಿಲ್ಲ. ದೇವಪ್ಪನಿಗೆ ಒಂದು ವಾರ ತಿರುಗುವಷ್ಟರಲ್ಲಿ ಸಾಕುಸಾಕಾಯಿತು. ಮನೆಮನೆಗೆ ಹೋಗಿ ಅವರು ಹಾಲು ಹಿಂಡುವತನಕ ನಿಂತು ಹಾಕಿಸಿಕೊಂಡು ಬರುವುದು ಸಾಮಾನ್ಯ ಮಾತಲ್ಲ. ಎಷ್ಟೊತ್ತು ನಿಲ್ಲಬೇಕು? ಎಷ್ಟೊತ್ತು ಅವರನ್ನು ಕೂಗಬೇಕು? ತನ್ನ ಕಾಲಿನ ಶಕ್ತಿ ಸೋರಿಹೋಗುತ್ತದೆ. ಒಮ್ಮೊಮ್ಮೆ ಅವರು ಇನ್ನೂ ಎದ್ದಿರುವುದೇ ಇಲ್ಲ. ಇವನೆ ಅವರನ್ನು ನಿದ್ದೆಯಿಂದ ಎಬ್ಬಿಸಿ, ಅವರು ಮುಖ ತೊಳೆದು ಬರುವ ತನಕ ನಿಂತು, ಅವರು ನಂತರ ರಾಸುಗಳಿಗೆ ಮೇವು ಹಾಕಿ ಹಿಂಡಲು ಕೂಡುವರು. ಹುಲ್ಲು ತರಲು ಗುಡ್ಡಕ್ಕೆ ಹೋದರೆ ಇಡೀ ಗುಡ್ಡವೆ ತನ್ನ ಮೈಮೇಲೆ ಬಿದ್ದರೆ ತಾನೇನು ಮಾಡುವುದು? ಇವನು ತನ್ನೆದುರು ಹಾಲು ಹಿಂಡಬೇಕೆಂದು ಅಪೇಕ್ಷಿಸುವನು. 'ಏನೋ ದ್ಯಾವಣ್ಣ, ನಮ್ಮ ಮ್ಯಾಲ ಅಷ್ಟು ನಂಬಿಕೆ ಇಲ್ಲೇನು? ನಾವೇನು ನೀರು ಕೂಡಿಸಿ ಹಾಕ್ತೇವಿ ಅಂತ ಅನಕೊಂಡಿ?' ಅವರ ಪ್ರತ್ಯುತ್ತರ ಕೇಳಿ ಇವನಿಗೆ ತಪ್ಪಿತಸ್ಥ ಭಾವನೆ ಬರುವುದು. 'ಸುಮ್ಮನೆ ನಗೆಚಾಟಿಕೆ ಮಾಡಿದ್ನಿ ತಗೋರಿ. ಮಲ್ಲೂರು ಬಾಳ ವಿಶ್ವಾಸದ ಊರು ಇದ್ದಿದ್ದಕ್ಕ ನಾ ಇಲ್ಲಿಗೆ ಬಂದು ಉಳಕೊಂಡೆ ಅಲ್ಲೇನ್ರಿ?' ಎನ್ನುತ್ತ ನಕ್ಕು ಆ ಸಂದರ್ಭವನ್ನು ಹೇಗೊ ಸಾಗಹಾಕುವನು. ಮಾಯಕ್ಕ ಒಂದು ಸಲ ಅಂದಳು: 'ಶಿವಣ್ಣಗ ಅಥವಾ ಮತ್ಯಾರಾದರೂ ಹೇಳ್ರಿ. ಯಾರನ್ನಾದರೂ ಹುಡುಕಿಕೊಡ್ತಾರ.' ಶಿವಣ್ಣನೂ ಅದನ್ನು ಗಮನಿಸಿದ್ದ. ಮುಂದೆ ಎರಡೇ ದಿನದಲ್ಲಿ ಚಿಗುರು ಮೀಸೆಯ ಹುಡುಗನನ್ನು ತಂದು ದೇವಪ್ಪನೆದುರು ನಿಲ್ಲಿಸಿದ. ಅರ್ಧಕ್ಕೆ ಕಾಲೇಜು ಬಿಟ್ಟಿದ್ದ ಶಿವಮೂರ್ತಿಗೆ ಇದೊಂದು ಒಳ್ಳೆಯ ಉದ್ಯೋಗವಾಯಿತು.

'ಅಲ್ಲ ಶಿವಣ್ಣ, ನೀನೂ ನಿಮ್ಮ ಅವ್ವನಿಂದ ಏನೂ ಮಾಡಂಗಿಲ್ಲ ಅಂತ ಬೈಸಿಕೊಳ್ಳತಾ ಇರ್ತಿ. ಅದಕ್ಕ ಏನು ಮಾಡಂದ್ರ ಶಿವಮೂರ್ತಿ ತುಂಬಿಸಿಕೊಂಡು ಬರೋ ಹಾಲನ್ನು ನೀನು ಟೆಂಪೋದಾಗೋ, ಬಸ್ಸಿನ್ಯಾಗೋ ತಗೊಂಡು ಹೋಗಿ ಬೈಲಹೊಂಗಲಕ್ಕೆ ಕೊಟ್ಟು ಬರಬೇಕು. ನಿಮ್ಮ ದ್ಯಾವಣ್ಣಗ ನಾ ಹೇಳೇನಿ. ಮಾಡ್ತಿಯಿಲ್ಲೋ ಈ ಕೆಲಸ?' ಮಾಯಕ್ಕನ ಮಾತು ಕೇಳಿ ಶಿವಣ್ಣನ ಕೈಗೆ ಮುಗಿಲು ಎಟುಕಿದಂತಾಯಿತು. ಅವನಿಗೆ ಇದೊಂದು ಹುರುಪಿನ ಕೆಲಸವಾಗಿತ್ತು. ಆರು ತಿಂಗಳು ಕಳೆಯುಷ್ಟರಲ್ಲಿ ಒಂದು ಕ್ಯಾನ್ ಹಾಲು ಇದ್ದಿದ್ದು ಈಗ ಆರು ಕ್ಯಾನ್‌ಗಳಾದವು. ಈಗ ಶಿವಣ್ಣನೂ ಆ ಹೊಟೇಲಿನಲ್ಲಿ ತಾನೂ ಮಾಲಿಕನೆ ಎನ್ನುವ ರೀತಿಯಲ್ಲಿ ಸ್ವಲ್ಪ ಗತ್ತಿನಲ್ಲಿ ಇರತೊಡಗಿದ. ಅವನಿಗೆ ಜನ ಮರ್ಯಾದೆಯನ್ನೂ ಕೊಡತೊಡಗಿದರು. ಹಾಲಿನ ವ್ಯಾಪಾರದಿಂದ ದೇವಪ್ಪ ಮತ್ತು ಊರವರ ಬಾಂಧವ್ಯ ಮತ್ತಷ್ಟು ಹೆಚ್ಚಾಗತೊಡಗಿತು. ಹಾಲಿನ ದುಡ್ಡು ಇಸಿದುಕೊಳ್ಳುವ ನೆಪ ಮಾಡಿಕೊಂಡು ಅವರು ಹೊಟೇಲಿಗೆ ಬರುವ ಮತ್ತೊಂದು ಅವಕಾಶ ಅವರಿಗೆ ದಕ್ಕಿತು.

'ಅಲ್ಲೋ ದ್ಯಾವಪ್ಪ, ನೀನು ಬ್ಯಾರೆ ಊರಾಂವ ಆಗಿ ನಮ್ಮನ್ನ ಮಳ್ಳ ಮಾಡ್ತಿ ನೋಡು.'

'ಅದ್ಹೆಂಗ್ರಿ ಕಾಕಾ, ನಾನು ಈ ಊರವರನ್ನು ಮಳ್ಳ ಮಾಡೋದು ಕನಸಿನ ಮಾತು. ಬೇಕಾದ್ರ ಈ ಶಿವಣ್ಣ ಅದಾನ ನೋಡ್ರಿ ಅವನು ಆ ತರಹ ಮಾಡಾಂವನು ಅನಿಸ್ತದ'.

'ಅಂವಂತೂ ಮಾಡೇ ಮಾಡ್ತಾನು. ಅದನ್ನ ಬಿಡು. ಆದರ ನೀ ಅದಿಯಲ್ಲ, ನೋಡು, ಎಷ್ಟು ಚಾಲಾಕಿ ಅದಿ. ನಾವು ಮೊದಲು ಚಹಾನೇ ಕುಡಿತಿರಲಿಲ್ಲ. ಚಹಾ ಕುಡೀಲಿಕ್ಕೆ ಕಲಿಸಿದಿ. ಮುಂಜಾನೆದ್ದ ಕೂಡ್ಲೇ ರೊಟ್ಟಿ ತಿಂತಿದ್ವಿ. ಅದನ್ನೆಲ್ಲ ಬಿಡಿಸಿ ಈಗ ಮುಂಜಾನೆದ್ದು ಉಪ್ಪಿಟ್ಟು, ಅವಲಕ್ಕಿ, ಪೂರಿ ಭಾಜಿ ಅಂತೆಲ್ಲ ಚಾಲೂ ಮಾಡಿ ನಮ್ಮ ಜೀವನ ಕ್ರಮಾನ ಬದಲಿ ಮಾಡೀದಿ ನೋಡು, ಅಲ್ಲ?

(ಸಶೇಷ)